**ಬೆಂಗಳೂರು ವಿಶ್ವವಿದ್ಯಾಲಯ**

**ಜ್ಞಾನಭಾರತಿ, ಬೆಂಗಳೂರು-560 056**

**ಸಂಖ್ಯೆ: ಇಎಸ್‌ಟಿ/ಇ1/ಹೊ.ಗು/ಅನುಮತಿ/ಸುತ್ತೋಲೆ/2020.** ದಿನಾಂಕ: 26.02.2021

**ಸುತ್ತೋಲೆ**

**ವಿಷಯ:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ/ಹೊರಗುತ್ತಿಗೆ ನೌಕರರು ಕಛೇರಿ ಅವಧಿಯಲ್ಲಿ ಕಾರ್ಯನಿರ್ವಹಿಸದೇ ವಿಶ್ವವಿದ್ಯಾಲಯದ ಕೆಲಸಗಳನ್ನು ಬಿಟ್ಟು ಬೇರೆ ಕಡೆ ಮತ್ತೊಂದು ಕೆಲಸದಲ್ಲಿ ತೊಡಗಿರುವ ನೌಕರರನ್ನು ಕೆಲಸದಿಂದ ತೆಗೆದು ಹಾಕುವ ಬಗ್ಗೆ.

**ಉಲ್ಲೇಖ:** ಕುಲಪತಿಗಳ ಅನುಮೋದನೆ ದಿನಾಂಕ: 23.02.2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಗಳ/ವಿಭಾಗಗಳ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ/ಹೊರಗುತ್ತಿಗೆ ನೌಕರರಲ್ಲಿ ಕೆಲವು ನೌಕರರು ಕಛೇರಿ ಅವಧಿಯಲ್ಲಿ ತಮ್ಮ ಕಾರ್ಯಸ್ಥಾನಗಳಲ್ಲಿ ಕಾರ್ಯ ನಿರ್ವಹಿಸದೇ, ವಿಶ್ವವಿದ್ಯಾಲಯದ ಕೆಲಸಗಳನ್ನು ಬಿಟ್ಟು ಬೇರೆ ಕಡೆ ಕೆಲಸಗಳನ್ನು ನಿರ್ವಹಿಸುತ್ತಿರುವುದು ವಿಶ್ವವಿದ್ಯಾಲಯದ ಅಧಿಕಾರಿಗಳ ಗಮನಕ್ಕೆ ತಿಳಿದು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಇನ್ನು ಮುಂದೆ ದಿನಗೂಲಿ/ಹೊರಗುತ್ತಿಗೆ ನೌಕರರು ವಿಶ್ವವಿದ್ಯಾಲಯದ ಕೆಲಸದ ಸಮಯದಲ್ಲಿ ವಿಶ್ವವಿದ್ಯಾಲಯದ ಕೆಲಸಗಳನ್ನು ಬಿಟ್ಟು ಬೇರೆ ಕಡೆ ಕೆಲಸಗಳನ್ನು ನಿರ್ವಹಿಸುವುದು ಕಂಡುಬಂದಲ್ಲಿ ಅಂತಹ ದಿನಗೂಲಿ/ಹೊರಗುತ್ತಿಗೆ ನೌಕರರನ್ನು ವಿಶ್ವವಿದ್ಯಾಲಯದ ಸೇವೆಯಿಂದ ತೆಗೆದು ಹಾಕಲಾಗುವುದೆಂದು ಸೂಚಿಸಲಾಗಿದೆ.

ಮುಂದುವರೆದು, ಕಛೇರಿ/ವಿಭಾಗಗಳ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ದಿನಗೂಲಿ/ಹೊರಗುತ್ತಿಗೆ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವವರು ಯಾರಾದರೂ ಕಛೇರಿ ಅವಧಿಯಲ್ಲಿ ಕಾರ್ಯ ನಿರ್ವಹಿಸದೇ, ಬೇರೆ ಕಡೆ ಕೆಲಸಗಳನ್ನು ನಿರ್ವಹಿಸುತ್ತಿರುವುದು ತಿಳಿದು ಬಂದರೆ, ಸಂಬಂಧಪಟ್ಟ ಕಛೇರಿ/ವಿಭಾಗಗಳ ಮುಖ್ಯಸ್ಥರು/ಪ್ರಧಾನ ಕ್ಷೇಮಪಾಲಕರುಗಳು ನೇರವಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಮಾಹಿತಿಯನ್ನು ನೀಡ ಬೇಕೆಂದು ಸೂಚಿಸಲಾಗಿದೆ.

K Jyothi 26/2/2021

ಕುಲಸಚಿವರು

ಗೆ,

1) ಕಛೇರಿಗಳ/ವಿಭಾಗಗಳ ಮುಖ್ಯಸ್ಥರು/ಪ್ರಧಾನ ಕ್ಷೇಮಪಾಲಕರು/ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056.
2) ಪ್ರಾಧ್ಯಾಪಕರು ಹಾಗೂ ನಿರ್ದೇಶಕರು, ರಾಮನಗರ ಸ್ನಾತಕೋತ್ತರ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ,ರಾಮನಗರ.

**ಪ್ರತಿಗಳು :-**

1. ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಕುಲಪತಿಗಳು / ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಕಛೇರಿ ಪ್ರತಿ.